ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

**O.S. No.488/2019. P.W.-1.**

ದಿನಾಂಕಃ**27.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಪಾಟೀ ಸವಾಲುಃ 2 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಬಿ ಆರ್ ವಕೀಲರಿಂದಃ-

ದಾವಾ ಸ್ವತ್ತಿನ ಸರ್ವೆ ನಂ.82 ಆಗಿರುತ್ತದೆ. ಸದರಿ ಸರ್ವೆ ನಂ.82 ರಲ್ಲಿ ಒಟ್ಟು 25 ಎಕರೆ ಜಮೀನು ಇದೆ. ಸದರಿ 25 ಎಕರೆ ಜಮೀನು ಸಾಗುವಳಿಗೆ ಒಳಪಟ್ಟಿದೆಯೇ ಎಂದರೆ ಸಾಕ್ಷಿಯು ಅದು ಸಾಗುವಳಿಗೆ ಒಳಪಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 25 ಎಕರೆ ಪೂರ್ತಿಯಾಗಿ ಖಾಲಿ ಇದೆ, ಯಾರು ಕೂಡ ಸಾಗುವಳಿ ಮಾಡಿರುವುದಿಲ್ಲ. ಸದರಿ 25 ಎಕರೆಯಲ್ಲಿಯೂ ಗಿಡಗಂಟೆಗಳು ಬೆಳೆದಿದೆ ಯಾರು ಉಳುಮೆ ಮಾಡುತ್ತಿಲ್ಲ. ನಾನು ಈ ದಾವೆಯನ್ನು ಎಲ್ಲಾ ಪ್ರತಿವಾದಿಗಳ ಮೇಲೆ ಹಾಕಿರುತ್ತೇನೆ. 2 ರಿಂದ 7 ನೇ ಪ್ರತಿವಾದಿಗಳು ಮುನಿಯಬೋವಿ ಕುಟುಂಬಸ್ಥರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನ ಚೆಕ್ಕುಬಂಧಿ ನನಗೆ ಗೊತ್ತು. ಪೂರ್ವ ಮತ್ತು ಪಶ್ಚಿಮಕ್ಕೆ ಸರ್ಕಾರಿ ಜಾಗ, ಉತ್ತರಕ್ಕೆ ಚೌಡಮ್ಮ ಮತ್ತು ದಕ್ಷಿಣಕ್ಕೆ ಸಣ್ಣಭೋವಿ ರವರ ಜಮೀನು ಇದೆ. ಸದರಿ ಚೌಡಮ್ಮ ಮತ್ತು ಸಣ್ಣಭೋವಿ ರವರು ಉಳುಮೆ ಮಾಡುತ್ತಿದ್ದಾರೆ ಆದರೆ ಸರ್ಕಾರಿ ಜಾಗ ಖಾಲಿ ಇದೆ. ದಾವಾ ಸರ್ವೆ ನಂಬರಿನ 25 ಎಕರೆ ಜಮೀನಿನ ವ್ಯಾಪ್ತಿಯಲ್ಲಿಯೇ ಚೌಡಮ್ಮ ಮತ್ತು ಸಣ್ಣಮ್ಮ ರವರ ಜಮೀನು ಬರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವ ಬಗ್ಗೆ ಜಮೀನಿನ ಪಹಣಿ, ಪೋಟೋ, ದೂರು ದಾಖಲು ಮಾಡಿದ್ದ ದೂರು ಅರ್ಜಿ ಮತ್ತು ಇತರ ದಾಖಲೆ ನೀಡಿರುತ್ತೇನೆ. ನಾನು ಹಾಜರುಪಡಿಸಿರುವ ಪಹಣಿಯು ಯಾರ ಹೆಸರಿನಲ್ಲಿ ಇದೆ ಎಂದು ಈಗ ಗೊತ್ತಿಲ್ಲ. ಸದರಿ ಪಹಣಿಯು ಡಿ.ಕಾರೆಹಳ್ಳಿ- ಬೋವಿ ಕಾಲೋನಿ ಗ್ರಾಮದ ಪಹಣಿಯಾಗಿರುತ್ತದೆ. ನಾನು ಹಾಜರುಪಡಿಸಿರುವ ಪಹಣಿಯಲ್ಲಿ ಸರ್ಕಾರಿ ಜಮೀನು 25 ಎಕರೆ ಇರುವ ಬಗ್ಗೆ ಹಾಗೂ ನಾನು 2 ಎಕರೆ ಸ್ವಾಧೀನದಲ್ಲಿ ಇರುವ ಬಗ್ಗೆ ನಮೂದು ಇರುತ್ತದೆ.

ನಾನು 9 ನೇ ತರಗತಿವರೆಗೂ ಓದಿರುತ್ತೇನೆ . ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಹಾಜರುಪಡಿಸಿರುವ ನಿಪಿ2 ರ ಪಹಣಿಯಲ್ಲಿ ನನ್ನ ಹೆಸರು ಅಥವಾ ನನ್ನ ತಾಯಿ ಗೌರಮ್ಮ ರವರು ಹೆಸರು ನಮೂದು ಇಲ್ಲ ಎಂದರೆ ಸರಿ. ಅದೇ ರೀತಿ 25 ಎಕರೆ ಗೋಮಾಳ ಇದೆಯೇ ಎಂದರೆ ಸಾಕ್ಷಿಯು ನನಗೆ ಪಹಣಿ ಓದಲು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

ನನಗೆ ಈಗ 34 ವರ್ಷವಾಗಿರುತ್ತದೆ. ಕಳೆದ 30-40 ವರ್ಷಗಳಿಂದ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇವೆ ಎಂದು ಹೇಳಿರುವ ಸಂಬಂಧವಾಗಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ ಆದರೆ ಜಮೀನಿಗೆ ಸಂಬಂಧಪಟ್ಟ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಪಹಣಿಯನ್ನು ಹೊರತು ಪಡಿಸಿ ದಾವಾ ಸ್ವತ್ತಿಗೆ ಸಂಬಂಧಪಟ್ಟ ಬೇರೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಸರ್ಕಾರದ ಜಮೀನನ್ನು ಅನಧಿಕೃತವಾಗಿ ಸಾಗುವಳಿ/ಉಳುಮೆ ಮಾಡುತ್ತಿದ್ದರು

ತಮ್ಮ-ತಮ್ಮ ಹೆಸರಿಗೆ ಮಂಜೂರು ಮಾಡಿಸಿಕೊಳ್ಳುವ ಸಲುವಾಗಿ ಯಾವ ಯಾವ ನಿಯಮಗಳನ್ನು ಪಾಲನೆ ಮಾಡಬೇಕು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಗೌರಮ್ಮ ರವರಿಗೆ ಇಬ್ಬರು ಮಕ್ಕಳು, ನಾನು ಮತ್ತು ಇನ್ನೊಬ್ಬಳು ವಿಜಯಕುಮಾರಿ. ವಿಜಯಕುಮಾರಿಯವರು ಸಿಂಘಟಗೆರೆಯಲ್ಲಿ ಇದ್ದಾರೆ. ನನ್ನ ಮದುವೆ ಆಗಿರುತ್ತದೆ. ನನ್ನ ತಂದೆಯ ಹೆಸರು ಚಂದ್ರಭೋವಿ. ನನ್ನ ತಾಯಿ ಗೌರಮ್ಮ ರವರ ತವರೂರು ಸಹಃ ಡಿ.ಕಾರೆಹಳ್ಳಿ - ಭೋವಿಕಾಲೋನಿಯಾಗಿರುತ್ತದೆ.

ಈ ದಾವೆಯ ವಿಚಾರಗಳನ್ನು ನಾವೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ವಾದ ಪತ್ರದಲ್ಲಿ ಯಾವ ಆಧಾರದ ಮೇಲೆ ದಾವಾ ಸ್ವತ್ತಿನ ಸ್ವಾಧೀನದಲ್ಲಿ ನಾವು ಇದ್ದೇವೆ ಎಂದು ನಮೂದು ಮಾಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಗೌರಮ್ಮ ಮೃತಪಟ್ಟು 25 ವರ್ಷವಾಗಿರುತ್ತದೆ. ನಾನು ಚಂದ್ರಭೋವಿ-ಗೌರಮ್ಮ ರವರ ಮಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಚಂದ್ರಭೋವಿ-ಗೌರಮ್ಮರವರ ಮಗಳು ಎಂದು ತೋರಿಸಲು ಯಾವ ದಾಖಲೆ ನೀಡಿರುತ್ತೇನೆ ಎಂದು ಈಗ ಗೊತ್ತಿಲ್ಲ. ನನ್ನ ತಾಯಿ ಗೌರಮ್ಮ ರವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಅನಧೀಕೃತವಾದ ಗೋಮಾಳದ ಜಮೀನನ್ನು ಸ್ವಾಧೀನವನ್ನು ಮಂಜೂರು ಮಾಡಿಸಿಕೊಳ್ಳಲು ಸರ್ಕಾರಕ್ಕೆ ಅರ್ಜಿ ನೀಡಬೇಕು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ನಾವು ಸುಮಾರು 25 ವರ್ಷಗಳ ಹಿಂದಿನಿಂದಲೂ ಬೆಳೆ ಬೆಳೆಯುತ್ತಿದ್ದೇವೆ ಹಾಗೂ ಈಗಲೂ ಸಹಃ ಬೆಳೆ ಬೆಳೆಯುತ್ತಿದ್ದೇವೆ.

ನಿಪಿ 6 ರ ಪೋಟೋ ಕಾಡು ಎಂದರೆ ಸರಿಯಲ್ಲ, ಅದು ಗೋಮಾಳದ ಜಮೀನು ಆಗಿರುತ್ತದೆ. ಸದರಿ ಪೋಟೋದಲ್ಲಿ ಕಾಣುವಂತೆ ಗಿಡಗಂಟೆಗಳು ಬೆಳೆದು ಕಲ್ಲುಬಂಡೆಗಳೆಲ್ಲ ಇದೆ ಎಂದರೆ ಸರಿ. ನಿಪಿ 6 ರಲ್ಲಿ ಕಾಣುವಂತೆ ನಾವು ಬೆಳೆ ಬೆಳೆದಿರುವುದು ಕಾಣುತ್ತಿಲ್ಲ ಹಾಗೂ ಈ ಪೂರ್ವದಲ್ಲಿಯೂ ಸಹಃ ಬೆಳೆ ಬೆಳೆದಿರುವಂತೆ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 6 ರ ಪೋಟೋದಲ್ಲಿ ಚೌಡಮ್ಮ ಮತ್ತು ಸಣ್ಣಭೋವಿರವರ ಜಮೀನು ಕಾಣುತ್ತಿಲ್ಲ.

ಅನಧೀಕೃತವಾಗಿ ಸರ್ಕಾರದ ಜಮೀನಿನಲ್ಲಿ ಸ್ವಾಧೀನ ಇದ್ದಲ್ಲಿ ಸದರಿ ಜಮೀನನ್ನು ಮಂಜೂರು ಮಾಡುವಂತೆ ಕೋರಿ ಸಂಬಂಧಪಟ್ಟ ಇಲಾಖೆಗೆ ಅರ್ಜಿ ನೀಡಬೇಕು ಎಂದರೆ ನನಗೆ ಗೊತ್ತಿಲ್ಲ. ಆ ರೀತಿಯಾಗಿ ಅರ್ಜಿ ನೀಡಿದ ನಂತರ ತಹಶೀಲ್ದಾರ್ ಕಛೇರಿಯಿಂದ ಸಿಬ್ಬಂದಿ ಬಂದು ಸ್ಥಳ ಪರಿಶೀಲನೆ ಮಾಡಿ ನಕಾಶೆ ತಯಾರು ಮಾಡುತ್ತಾರೆ ಎಂದರೆ ನಮ್ಮ ಜಮೀನಿಗೆ ಆ ರೀತಿ ಮಾಡಿರುವುದಿಲ್ಲ. ಆದರೆ ನಾವು ಅರ್ಜಿ ನೀಡಿರುತ್ತೇವೆ. ಆ ರೀತಿಯಾಗಿ ತಯಾರು ಮಾಡಿದ ನಕಾಶ ಮತ್ತು ಅರ್ಜಿಯನ್ನು ಮಂಜೂರಾತಿ ಪ್ರಾಧಿಕಾರದ ಮುಂದೆ ಇಟ್ಟರೆ ಸದರಿ ಅರ್ಜಿಯಲ್ಲಿ ನೈಜತೆ ಕಂಡುಬಂದರೆ ಪ್ರಾಧಿಕಾರದವರು ತಹಶೀಲ್ದಾರ್ ರವರಿಗೆ ಸ್ವತ್ತನ್ನು ಅರ್ಜಿದಾರರ ಹೆಸರಿಗೆ ಮಂಜೂರು ಮಾಡುವಂತೆ ಶಿಫಾರಸ್ಸು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4 ನೇ ಪ್ರತಿವಾದಿ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ತಂದೆ / ಗಂಡನ ಹೆಸರು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯು ಡಿ.ಕಾರೆಹಳ್ಳಿ - ಭೋವಿಕಾಲೋನಿಯವರೇ ಆಗಿರುತ್ತಾರೆ. 4 ನೇ ಪ್ರತಿವಾದಿಗೆ ಸರ್ವೆ ನಂ.82 ರಲ್ಲಿ 4 ಎಕರೆ 15 ಗುಂಟೆ ಜಮೀನನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯು 4 ಎಕರೆ 15 ಗುಂಟೆ ಜಮೀನನ್ನು ಅನಧೀಕೃತವಾಗಿ ಸಾಗುವಳಿ ಮಾಡಿ ನಂತರ ಸರ್ಕಾರಕ್ಕೆ ಅರ್ಜಿ ನೀಡಿ ತಹಶೀಲ್ದಾರ್ ರವರು ಸ್ಥಳ ಪರಿಶೀಲನೆ ಮಾಡಿ ನಕಾಶೆ ತಯಾರು ಮಾಡಿ ನಂತರ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ 4 ನೇ ಪ್ರತಿವಾದಿಗೆ 4 ಎಕರೆ 15 ಗುಂಟೆ ಜಮೀನಿಗೆ ಸಾಗುವಳಿ ಚೀಟಿಯನ್ನು ಸಂಖ್ಯೆ 1473/2022-23 ರಂತೆ ಸರ್ಕಾರದಿಂದ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಫಾರ್ಮ್ ನಂ.50, 54, 57 ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1950 ರಿಂದ 1953 ರ ಸಾಲಿನಲ್ಲಿ ನನ್ನ ತಾಯಿಯವರು ಅರ್ಜಿ ನೀಡಿರುತ್ತಾರೆ. ಆ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ದಾಖಲೆಯನ್ನು ನಾನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮೇಲೆ ಹೇಳಿದ ದಾವಾ ಸ್ವತ್ತಿನ ಚೆಕ್ಕುಬಂಧಿಯ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ.

4 ನೇ ಪ್ರತಿವಾದಿಯು ಉಳುಮೆ ಮಾಡುತ್ತಿರುವ ಜಮೀನನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ.82 ರ 25 ಎಕರೆಯಲ್ಲಿ ಸುಮಾರು ಎಷ್ಟು ಜನರು ಉಳುಮೆ ಮಾಡುತ್ತಿದ್ದಾರೆ ಎಂದರೆ ಯಾರು ಸಹ ಉಳುಮೆ ಮಾಡುತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.